**ಅಸಲು ದಾವೆ ಸಂಖ್ಯೆ 04/2017**

**ಪಿ.ಡಬ್ಲ್ಯೂ 01**

**ದಿಃ29.07.2022 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರ ಶ್ರೀ ಡಿ.ಎನ್ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ಸಂತಿಗಳು ಸತ್ಯವಿರುತ್ತವೆ. ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ ನನ್ನ ದಾವೆಗೆ ಪೂರಕವಾಗಿ ಕೆಲವೊಂದು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಗುರುತಿಸುವಂತೆ ಕೋರುತ್ತೇನೆ.

1. ಏಳು (7) ಖಾತಾ ಉತಾರೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ1 ರಿಂದ ನಿಪಿ.7 ಎಂದು ಗುರುತಿಸಲಾಯಿತು.

2. ಗ್ರಾಮಪಂಚಾಯತಿ ಇವರು ಅನುಮೋದಿಸಿದ ನಕಾಶೆಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ.8 ಎಂದು ಗುರುತಿಸಲಾಯಿತು.

3. ಗ್ರಾಮಪಂಚಾಯತಿಯ ಪ್ರಸ್ತಾವನೆಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ.9 ಎಂದು ಗುರುತಿಸಲಾಯಿತು.

4. ಗ್ರಾಮಪಂಚಾಯತಿವರು ಹಾಜರು ಪಡಿಸಿದ ಆದೇಶದ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ನಿಪಿ.10 ಎಂದು ಗುರುತಿಸಲಾಯಿತು.

5. ಗ್ರಾಮಪಂಚಾಯತಿ ಬಾಗಲವಾಡ ಇವರಿಗೆ ನೀಡಿದ ನೋಟಿಸಿನ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ನಿಪಿ.11 ಎಂದು ಗುರುತಿಸಲಾಯಿತು.

6. 24 ನಮೂನೆ 9 ರ ನಕಲುಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ12 ರಿಂದ 35 ಎಂದು ಗುರುತಿಸಲಾಯಿತು.

7. 5 ಪಹಣಿಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ36 ರಿಂದ ನಿಪಿ.40 ಎಂದು ಗುರುತಿಸಲಾಯಿತು. ಆದ್ದರಿಂದ ನಾನು ಸಲ್ಲಿಸಿದ ದಾವೆಯನ್ನು ಡಿಕ್ರಿ ಮಾಡುವಂತೆ ಕೋರುತ್ತೇನೆ.

**ಪಾಟೀ ಸವಾಲುಃ ಶ್ರೀ ವಿ.ಪಿ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದುಡಲಾಯಿತು.**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**

**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**